## ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:-** ಡಾ|| ಟಿ. ಜೆ. ವೀರನಾಯ್ಕ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಾನ್ವಿ, ರಾಯಚೂರು ಜಿಲ್ಲೆ ಮತ್ತು ಇತರರ ವಿರುದ್ಧದ ಶಿಸ್ತು ಕ್ರಮ ಅಂತಿಮ ಆದೇಶ.

**ಓದಲಾಗಿದೆ:** 1. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 12 ವಿಸೇಜಿ 2008. ದಿ: 06-11-2008 ಮತ್ತು 30-11-2010.

2. ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳು.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 12 ವಿಸೇಜಿ 2008 ದಿ: 12-01-2011.
4. ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿ: 27-09-2014.
5. 2 ನೇ ಕಾರಣ ಕೇಳುವ ನೋಟಿಸ್ ದಿ: 31-03-2015.
6. 2 ನೇ ಕಾರಣ ಕೇಳುವ ನೋಟಿಸ್‌ಗೆ ಆಪಾಧಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳು.

------

**ಪ್ರಸ್ತಾವನೆ:-**

ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕು ಪಂಚಾಯತಿ ವ್ಯಾಪ್ತಿಯ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ತಾಲ್ಲೂಕು ಪಂಚಾಯತಿಯ ಲೆಕ್ಕ ತಪಾಸಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿ ಎನ್.ಆರ್.ಇ.ಜಿ.ಎ. ಯೋಜನೆಯಡಿ ನಾಮಫಲಕಗಳನ್ನು ಪಾರದರ್ಶಕ ನಿಯಮ ಉಲ್ಲಂಘಿಸಿ ಖರೀದಿಸಿರುವದರ ಜೊತೆಗೆ ಹಲವಾರು ಆರೋಪಗಳಲ್ಲಿ ಭಾಗಿಯಾಗಿ ಹಣದುರುಪಯೋಗ ಪಡಿಸಿಕೊಡಿರುವ ಆರೋಪಗಳ ಕುರಿತಂತೆ ಈ ಕೆಳಕಂಡ ಅಧಿಕಾರಿ/ನೌಕರರಿಗೆ ಕರ್ನಾಟಕ ನಾಗರೀಕ ಸೇವಾ (ವನಿಮೆ) ನಿಯಮಗಳು 1957 ರ ನಿಯಮ 11 ರಡಿ ಕಾರಣ ಕೇಳುವ ನೋಟಿಸ್‌ನೊಂದಿಗೆ ದೋಷಾರೋಪಣ ಪಟ್ಟಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಜಾರಿ ಮಾಡಲಾಗಿತ್ತು.

1) ಡಾ|| ಟಿ. ಜಿ. ವೀರನಾಯ್ಕ. ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಾನ್ವಿ
2) ಶ್ರೀ. ವಿಜಯರಾವ್, ಹಿಂದಿನ ಪ್ರಥಮ ದರ್ಜೆ ಲೆಕ್ಕ ಸಹಾಯಕ, ತಾಲ್ಲೂಕು ಪಂಚಾಯತಿ, ಮಾನ್ವಿ
3) ಶ್ರೀ. ಜಂಬಣ್ಣ, ಹಿಂದಿನ ಲೆಕ್ಕಾಧೀಕ್ಷಕರು, ತಾಲ್ಲೂಕು ಪಂಚಾಯತಿ, ಮಾನ್ವಿ

ಸದರಿ ನೋಟೀಸ್‌ಗೆ ಆಪಾಧಿತರು ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಲಿಖಿತ ಹೇಳಿಕೆಗಳನ್ನು ಸಲ್ಲಿಸಿ ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿದ್ದು, ಪ್ರಕರಣದಲ್ಲಿ ಭಾಗಿಯಾದ ಶ್ರೀ. ಜಂಬಣ್ಣ ಹಿಂದಿನ ಲೆಕ್ಕಾಧೀಕ್ಷಕರು, ಜಿಲ್ಲಾ ಪಂಚಾಯತಿ ರಾಯಚೂರು ಇವರು ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆಪಾಧಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಒಪ್ಪದೆ ಸದರಿಯವರಗಳ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ತಿಳಿಯಲು ವಿವರವಾದ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಶ್ರೀ. ಎಮ್. ಎನ್. ಗದಗ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿಗಳು ಪ್ರಕರಣದ ತನಿಖೆಯನ್ನು ನಡೆಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ದಿನಾಂಕ: 27-09-2014 ರಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಆಪಾಧಿತ ಅಧಿಕಾರಿಗಳಾದ ಶ್ರೀ. ಟಿ. ಜಿ. ವೀರನಾಯ್ಕ , ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ. ಜಂಬಣ್ಣ, ಹಿಂದಿನ ಲೆಕ್ಕಾಧೀಕ್ಷಕರು ಹಾಗೂ ಶ್ರೀ ವಿಜಯರಾವ್ ಹಿಂದಿನ ಪ್ರಥಮ ದರ್ಜೆ ಲೆಕ್ಕ ಸಹಾಯಕ ಇವರುಗಳ ವಿರುದ್ಧ ಮಾಡಲಾಗಿದ್ದ ವಿವಿಧ ಆರೋಪಗಳ ಪೈಕಿ ಎಲ್ಲರಿಗೂ ಅನ್ವಯಿಸುವ ಈ ಕೆಳಕಂಡ ಆರೋಪ ಮಾತ್ರ ಸಾಬೀತಾಗಿರುತ್ತದೆಂದು ವಿಚಾರಣಾಧಿಕಾರಿಯವರು ನಿರ್ಣಯಿಸಿದ್ದು, ಅದರ ಉದ್ಧೃತ ಭಾಗವು ಈ ಕೆಳಕಂಡಂತಿರುತ್ತದೆ:-

"ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಮಾರ್ಗಸೂಚಿಗಳಿಗೆ ತದ್ವಿರುದ್ಧವಾಗಿ ವಾಹನ ಸಂಖ್ಯೆ: ಕೆಎ-36 ಜಿ-7 ದುರಸ್ಥಿಗಾಗಿ ರೂ. 60,000/- ಗಳನ್ನು ಸ್ವಂತಕ್ಕೆಂದು ಚೆಕ್ ಬರೆದು ನಿಯಮಬಾಹಿರವಾಗಿ ಎತ್ತುವಳಿ ಮಾಡಿರುತ್ತಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ವಾಹನ ದುರಸ್ಥಿಗೆ ಹಣ ಬಳಕೆ ಮಾಡಲು ಅವಕಾಶವಿದ್ದರೂ, ಮೇಲಾಧಿಕಾರಿಗಳ ಯಾವುದೇ ಅನುಮೋದನೆ/ಆದೇಶವಿಲ್ಲದಿದ್ದರೂ ಹಣ ಪಡೆದು ಯೋಜನೆಯ ಮಾರ್ಗಸೂಚಿಯನ್ನು ಉಲ್ಲಂಘಿಸಿ ಹಣ ದುರುಪಯೋಗಕ್ಕೆ ಕಾರಣರಾಗಿರುತ್ತಾರೆ".

ಪ್ರಕರಣದಲ್ಲಿ ಭಾಗಿಯಾಗಿರುವ ಮೂವರು ಆಪಾದಿತರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ದಿ: 31-03-2015 ರಲ್ಲಿ ವಿಚಾರಣಾ ವರದಿಯ ಪ್ರತಿಯೊಂದಿಗೆ 2 ನೇ ಕಾರಣ ಕೇಳುವ ನೋಟಿಸ್‌ನ್ನು ಜಾರಿ ಮಾಡಲಾಗಿತ್ತು. ಸದರಿ ನೋಟಿಸ್‌ಗೆ ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ಆಪಾದಿತರು ಲಿಖಿತ ಹೇಳಿಕೆಗಳನ್ನು ಸಲ್ಲಿಸಿದ್ದು ಅವರುಗಳು ನೀಡಿರುವ ಉತ್ತರದ ಸಾರಾಂಶಗಳು ಈ ಕೆಳಕಂಡಂತಿರುತ್ತವೆ:-

1) ಶ್ರೀ. ಟಿ. ಜಿ. ವಿರ್‌ನಾಯ್ಕ್ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಮಾನ್ವಿ ತಾಲ್ಲೂಕು ಪಂಚಾಯತಿ, ರಾಯಚೂರು ಜಿಲ್ಲೆ ಇವರು ತಮ್ಮ ಲಿಖಿತ ಹೇಳಿಕೆಯಲ್ಲಿ ವಾಹನದ ತುರ್ತು ರಿಪೇರಿಗಾಗಿ ಹಣ ಖರ್ಚು ಮಾಡಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆದರೆ, ವೋಚರ್ ಹಾಜರುಪಡಿಸುವುದು ತಮ್ಮ ಕರ್ತವ್ಯವಲ್ಲವೆಂದೂ, ಇದಕ್ಕೆ ತಮ್ಮ ಅಧೀನ ಸಿಬ್ಬಂದಿಯು ಜವಾಬ್ದಾರರೆಂದು ತಿಳಿಸಿರುತ್ತಾರೆ. ಆದರೆ ಸದರಿಯವರು ಡ್ರಾಯಿಂಗ್ ಆಫೀಸರ್ ಆಗಿರುವುದರಿಂದ ಈ ಜವಾಬ್ದಾರಿಯಿಂದ ನುಣಚಿಕೊಳ್ಳುವುದು ಸಾಧ್ಯವಿರುವುದಿಲ್ಲ.

2) ಶ್ರೀ. ವಿಜಯರಾವ್ ಹಿಂದಿನ ಪ್ರಥಮ ದರ್ಜೆ ಲೆಕ್ಕ ಸಹಾಯಕ, ಮಾನ್ವಿ ತಾಲ್ಲೂಕು ಪಂಚಾಯತಿ ರವರು ಹೇಳಿಕೆಯಲ್ಲಿ ವರ್ಗಾವಣೆ ಸಮಯದಲ್ಲಿ ಎಲ್ಲಾ ದಾಖಲೆಗಳು ಮತ್ತು ವೋಚರಗಳನ್ನು ಶ್ರೀ. ವಿಜಯಕುಮಾರ್ ಡಿವಿಡ್ ಎನ್ನುವವರಿಗೆ ಹಸ್ತಾಂತರಿಸಿರುವುದಾಗಿ ತಿಳಿಸಿದ್ದು, ತಮ್ಮಿಂದ ಸರ್ಕಾರಕ್ಕೆ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ. ಆದರೆ ನಿಯಮಗಳು ಹಾಗೂ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದುದನ್ನು ಒಪ್ಪಿಕೊಳ್ಳುತ್ತಾರೆ. ಸದರಿಯವರು ವೋಚರಗಳನ್ನು ವಿಚಾರಣೆ ಸಂದರ್ಭದಲ್ಲಿ ಸಲ್ಲಿಸಿರುವುದಿಲ್ಲವಾದ್ದರಿಂದ ಈ ವಾದವನ್ನು ಒಪ್ಪಲು ಬರುವುದಿಲ್ಲ.

3) ಶ್ರೀ. ಜಂಬಣ್ಣ, ನಿವೃತ್ತ ಲೆಕ್ಕಾಧೀಕ್ಷಕರು, ತಮ್ಮ ಹೇಳಿಕೆಯಲ್ಲಿ ತಾವು ದಿ: 31-3-2014 ರಂದು ನಿವೃತ್ತಿ ಹೊಂದಿದ ಸಂದರ್ಭದಲ್ಲಿ ರೂ. 60,000/- ಗಳ ವೆಚ್ಚಕ್ಕೆ ಸಂಬಂಧಿಸಿದಂತೆ ದಾಖಲೆ ಹಾಗು ವೋಚರಗಳನ್ನು ಹಸ್ತಾಂತರಿಸಿರುವುದಾಗಿಯೂ, ಆದರೆ ಹಣ ದುರುಪಯೋಗ ಆಗಿರುವುದಿಲ್ಲವೆಂದು ತಿಳಿಸುತ್ತಾ, ತಾವು ನಿಯಮಗಳು ಹಾಗೂ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಆದರೆ, ಸದರಿಯವರು ವೋಚರಗಳನ್ನು ವಿಚಾರಣಾ ಸಂದರ್ಭದಲ್ಲಿ ಹಾಜರುಪಡಿಸಿಲ್ಲವಾದ್ದರಿಂದ ಅವರ ಹೇಳಿಕೆಯನ್ನು ಒಪ್ಪಲು ಬರುವುದಿಲ್ಲ.

ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟ ರೂ. 60,000/- ಗಳಿಗೆ ಎಲ್ಲಾ ಮೂವರು ಅಧಿಕಾರಿ/ನೌಕರರುಗಳು ಜವಾಬ್ದಾರರೆಂದು ಪರಿಗಣಿಸಿ ಸದರಿ ಮೊತ್ತವನ್ನು ಹಣ ದುರುಪಯೋಗವಾದ ದಿನಾಂಕದಿಂದ ಅನ್ವಯವಾಗುವಂತೆ ಬಡ್ಡಿಯೊಂದಿಗೆ ಸಮಾನವಾಗಿ ವಸೂಲು ಮಾಡಲು ಮತ್ತು ಕರ್ತವ್ಯಲೋಪ ಹಾಗೂ ಹಣದುರುಪಯೋಗದ ಆರೋಗಳಿಗೆ ಸಂಬಂಧಿಸಿದಂತೆ ದಂಡನೆಯನ್ನು ವಿಧಿಸಲು ಮುಂದುವರೆದು, ಶ್ರೀ. ಜಂಬಣ್ಣ, ಹಿಂದಿನ ಲೆಕ್ಕಾಧೀಕ್ಷಕರು, ತಾಲ್ಲೂಕು ಪಂಚಾಯತಿ, ಮಾನ್ವಿ ಇವರು ಈಗಾಗಲೇ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಇವರು ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು 214 ರಡಿ ಶಿಸ್ತುಕ್ರಮ ಜರುಗಿಸಲು ವಿಚಾರಣಾ ವರದಿಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 12 ವಿಸೇಬಿ 2008 ಬೆಂಗಳೂರು ದಿನಾಂಕ:18-06-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಈ ಕೆಳಕಂಡ ಅಧಿಕಾರಿ/ನೌಕರರಿಗೆ ಕ್ರಮಾಂಕ ಗ್ರಾಅಪ 12 ವಿಸೇಬಿ 2008, ದಿ:06-11-2008 ಮತ್ತು ದಿ:30-11-2010.ರ ಕಾರಣ ಕೇಳುವ ನೋಟೀಸಿನ ಜೊತೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(iii) ರಡಿ ಪ್ರದತ್ತವಾದ ಅಧಿಕಾರದನ್ವಯ " ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಹೊಂದದಂತೆ(Without Cumulative Effective) ತಡೆಹಿಡಿಯುವ ದಂಡನೆ" ವಿಧಿಸಿ, ಆದೇಶಿಸಿದೆ. ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(iv-A) ರಡಿ ಪ್ರದತ್ತವಾದ ಅಧಿಕಾರದನ್ವಯ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ದುರುಪಯೋಗವಾದ ದಿನಾಂಕದಿಂದ ಅನ್ವಯವಾಗುವಂತೆ ಬಡ್ಡಿಯೊಂದಿಗೆ ಸಮಾನವಾಗಿ ವಸೂಲು ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು ರವರಿಗೆ ಆದೇಶಿಸಿದೆ.

1) ಡಾ॥ ಟಿ. ಜಿ. ವೀರನಾಯ್ಕ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಾನ್ವಿ
2) ಶ್ರೀ. ವಿಜಯರಾವ್, ಹಿಂದಿನ ಪ್ರಥಮ ದರ್ಜೆ ಲೆಕ್ಕ ಸಹಾಯಕ, ತಾಲ್ಲೂಕು ಪಂಚಾಯತಿ, ಮಾನ್ವಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

18/6/2016

(ಎಸ್. ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌದ/ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌದ/ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
6. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು ಇವರ ಮುಖಾಂತರ).

ಪ್ರತಿಯನ್ನು ಮಾಹಿತಿಗಾಗಿ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ~~ವಿಶೇಷಾಧಿಕಾರಿ~~, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

GO